ಎಡಪಂಥೀಯ ಬರಹಗಾರರು ಮತ್ತು ಆಧುನಿಕ ಲಿಬರಲ್‌ಗಳು ಮನವಿ ಪತ್ರಕ್ಕೆ ಸಹಿ ಹಾಕಲು ನಾನು ಸಹಾಯ ಮಾಡಬೇಕೆಂದು ಬಯಸಿದರು. ಅವರೆಲ್ಲರೂ ನನ್ನ ಪುಸ್ತಕಗಳಿಗೆ ಸಂಬಂಧಿಸಿಲ್ಲದ ರಾಜಕೀಯ ವಿಷಯಗಳನ್ನು ಮಾಡಲು ಕೇಳಿದರು.

ಕೂಡಲೇ ಸ್ಥಾಪಿತ ಸಂಸ್ಥೆಗಳು ನನ್ನ ವ್ಯಕ್ತಿತ್ವವನ್ನು ಹಳಿಯುವುದಕ್ಕೆ ಶುರುಮಾಡಿದವು. ಏನೇನೋ ಹೆಸರುಗಳಿನ್ನಿಟ್ಟು ಕರೆಯತೊಡಗಿದರು. ಸಿಕ್ಕಾಪಟ್ಟೆ ಸಿಟ್ಟು ಬಂತು. ಮೇಲ್ಮಧ್ಯಮ ವರ್ಗದಿಂದ ಬಂದ ನಾನು ರಾಜಕೀಯ ಪ್ರಾತಿನಿಧ್ಯವಿಲ್ಲದವರ ಕುರಿತು ಕಾದಂಬರಿ ಬರೆದು ಅದರ ಮೂಲಕ ನನ್ನ ತಳಮಳಗಳನ್ನು ಶೋಧಿಸಿದರೆ ಹೇಗೆ? ಎಂದು ಆಮೇಲೆ ಯೋಚಿಸಿದೆ. ನನಗೆ ಕಾದಂಬರಿ ಎನ್ನುವ ಕಲೆಯ ಬಗ್ಗೆ ನಂಬಿಕೆಯಿದೆ. ಅದು ನಿಮ್ಮನ್ನು ಅನ್ಯನನ್ನಾಗಿಸುವ ಪರಿ ವಿಚಿತ್ರ. ನಾನೊಂದು ರಾಜಕೀಯ ಕಾದಂಬರಿ ಬರೆಯುತ್ತೇನೆ ಎಂದು ಅಂದುಕೊಂಡೆ. 'ಮೈ ನೇಮ್ ಇಸ್ ರೆಡ್' ಮುಗಿಸುತ್ತಿದ್ದಂತೆ ಬರೆಯಲು ಶುರುಮಾಡಿದೆ.

◆ **ಕಾದಂಬರಿಯ ಕಡೆಗಿನ ನಿಮ್ಮ ಬದ್ಧತೆ ನಿಮ್ಮನ್ನು ತೊಂದರೆಗೆ ಸಿಲುಕಿಸಿದೆ. ಮುಂದೆ ಇನ್ನೂ ತೊಂದರೆಯಾಗಬಹುದು. ಭಾವನಾತ್ಮಕವಾಗಿ ಕೂಡ ನೀವು ಬಹಳಷ್ಟು ಬೆಲೆ ತೆತ್ತಿರುವಿರಿ.**

ಹೌದು, ಅದೊಂದು ಅದ್ಭುತ ಸಂಗತಿ. ಪ್ರಯಾಣ ಮಾಡುತ್ತಿರುವಾಗ, ನನ್ನ ಮೇಜಿನ ಮುಂದೆ ಕೂತಾಗ ಒಬ್ಬನೇ ಇಲ್ಲದಿದ್ದರೆ ಬಹಳ ಖಿನ್ನನಾಗಿಬಿಡುತ್ತೇನೆ. ರೂಮಿನಲ್ಲಿ ಒಬ್ಬನೇ ಇದ್ದು ಏನನ್ನಾದರೂ ಅನ್ವೇಷಿಸುತ್ತಿರುವಾಗ ಖುಷಿಯಾಗಿರುತ್ತೇನೆ. ಅದು ಇಷ್ಟಪಡುವ ಕಲೆ ಅಥವಾ ಕೌಶಲ್ಯಕ್ಕೆ ಬದ್ಧನಾಗಿರುವುದಕ್ಕಿಂತ ರೂಮಿನಲ್ಲಿ ಒಬ್ಬನೇ ಇರುವ ಬದ್ಧತೆ. ನಾನು ಬರೆದದ್ದು ಒಂದು ದಿನ ಪ್ರಕಟವಾಗುತ್ತದೆ ಎನ್ನುವ ನಂಬಿಕೆಯೊಂದಿಗೆ ನನ್ನ ಹಗಲುಗನಸುಗಳಿಗೆ ರೂಪಕೊಡುತ್ತೇನೆ. ಏಕಾಂತ, ಒಳ್ಳೆಯ ಕಾಗದ ಮತ್ತು ಫೌಂಟೆನ್ ಪೆನ್ ಇವಿಷ್ಟು ನನಗೆ ಬೇಕು. ತಮ್ಮ ಆರೋಗ್ಯಕ್ಕಾಗಿ ಮಾತ್ರೆ ತೆಗೆದುಕೊಳ್ಳುತ್ತಾರಲ್ಲ ಹಾಗೆ. ಈ ವ್ರತಕ್ಕೆ ಬದ್ಧನಾಗಿದ್ದೇನೆ.

◆ **'ಇಸ್ತಾಂಬುಲ್' ಓದಿದಾಗ ನೀವು ಯಾವಾಗಲೂ ಒಂಟಿಯಾಗೇ ಇದ್ದಿರಿ ಅನ್ನಿಸುತ್ತದೆ. ಇಂದು ಆಧುನಿಕ ಟರ್ಕಿಯಲ್ಲಿ ಬರಹಗಾರನಾಗಿ ಒಂಟಿಯಾಗೇ ಇರುವಿರಿ. ನೀವು ಬೆಳೆದು ಬಂದ ಹಾಗೂ ಬದುಕುತ್ತಿರುವ ಪ್ರಪಂಚದಿಂದ ಈಗಲೂ ದೂರದಲ್ಲೇ ಇರುವಿರಿ.**

ದೊಡ್ಡ ಕುಟುಂಬದಲ್ಲಿ ಬೆಳೆದರೂ ಜನರ ಜೊತೆ ಬೆರೆಯಬೇಕೆಂದು ಕಲಿಸಿದರೂ ಸ್ವಭಾವತಃ ಅವುಗಳಿಂದ ದೂರವೇ ಉಳಿದುಬಿಟ್ಟೆ. ನನ್ನಲ್ಲಿ ಆತ್ಮವಿನಾಶಕ ಸ್ವಭಾವವೂ ಇದೆ. ಕೋಪದಲ್ಲಿ ಸಮಾಜದಲ್ಲಿ ನನ್ನೊಂದಿಗಿನ ಒಳ್ಳೆಯ ಸಂಬಂಧಗಳಿಂದಲೂ ದೂರವಾಗಿದ್ದೇನೆ. ಬಹಳ ಚಿಕ್ಕಂದಿನಲ್ಲೇ ಸಮುದಾಯವು ನನ್ನ ಕಲ್ಪನೆಯನ್ನು ಕೊಲ್ಲುತ್ತದೆ ಎನ್ನುವುದು ಅರ್ಥವಾಗಿತ್ತು. ನನ್ನ ಕಲ್ಪನೆ ಗರಿಗೆದರಿ ಕೆಲಸ ಮಾಡಲು ಒಂಟಿತನವನ್ನು ಅಪ್ಪಿಕೊಂಡಿದ್ದೆ. ಆಗ ಖುಷಿಯಾಗಿದ್ದೆ. ಟರ್ಕಿಯವನಾಗಿ ಆಮೇಲೆ ಮನಸಿಗೆ ಸಾಂತ್ವನ ನೀಡುವ ಸಮಾಜದ ಸಂಗ ಬೇಕೆನಿಸುತ್ತಿತ್ತು. ಅದನ್ನು ಹಾಳುಮಾಡಿಕೊಂಡಿದ್ದೆ. 'ಇಸ್ತಾಂಬುಲ್' ಬರೆದಮೇಲೆ ಅಮ್ಮನೊಡನೆಯ ಸಂಬಂಧ ಹಾಳಾಯಿತು. ನಾವೀಗ ಪರಸ್ಪರ ಭೇಟಿಯಾಗುವುದೇ ಇಲ್ಲ. ಅಣ್ಣನನ್ನು ಕೂಡ ಭೇಟಿ ಮಾಡಿ ಎಷ್ಟೋ ದಿನಗಳಾದವು. ಇತ್ತೀಚಿಗಿನ ನನ್ನ ಕಾಮೆಂಟ್‌ಗಳಿಂದಾಗಿ ಟರ್ಕಿಯ ಜನತೆಯೊಂದಿಗಿನ ಸಂಬಂಧ ಕೂಡ ಕೆಟ್ಟಿದೆ.

◆ **ನೀವು ಯಾರಿಗಾಗಿ ಬರೆಯುತ್ತೀರಿ?**

ಬದುಕು ಕಿರಿದಾಗುತ್ತ ಹೋದಂತೆ ಈ ಪ್ರಶ್ನೆಯನ್ನು ನಿಮಗೆ ನೀವೇ ಕೇಳಿಕೊಳ್ಳುವಿರಿ. ಈ ವರೆಗೆ